# ಅನುವಾದಿತ ಕತೆ

ಗೌನಿನ ತೋಳಿನಿಂದ ಅವನು ಹಣೆಯ ಮೇಲೆ ಸಾಲುಗಟ್ಟಿದ ಬೆವರು ಹನಿಗಳನ್ನು ಒರೆಸಿದ. ನೆಟ್ಟಗಾದ ಕಿವಿಗಳಿಗೆ ಎದೆ ಬಡಿತವಷ್ಟೇ ನಗಾರಿಯಂತೆ ಕೇಳಿಸುತ್ತಿತ್ತು. ಮತ್ತೆ ಮೌನ. ಏನೂ ಇರಲಾರದು. ಅವನು ಸಮಧಾನಪಟ್ಟುಕೊಂಡ. ಅಷ್ಟರಲ್ಲಿ ಅವನಿಗೆ ಹೆಂಡತಿಯ ಕೋಣೆಯಿಂದ ಏನೋ ಸದ್ದು ಕೇಳಿಸಿತು. ಈವರೆಗೆ ಅಸ್ಪಷ್ಟವಾಗಿದ್ದ ಸಪ್ಪಳ ಈಗ ಒಂದು ರೂಪವನ್ನು ಪಡೆಯತೊಡಗಿತು. ಆದರೆ, ಅವನ ದೃಷ್ಟಿ ಮಾತ್ರ ತನ್ನ ಕೋಣೆಯ ಬಾಗಿಲಿನ ಮೇಲೆಯೇ ಇತ್ತು. ಹೊರಗಿನ ಮಳೆ, ಗಾಳಿಯ ಸದ್ದನ್ನಷ್ಟೇ ಕೇಳಿಸಿಕೊಳ್ಳಲು ಅವನು ಹಾತೊರೆಯುತ್ತಿದ್ದ.

ಕೆಲವು ಸಮಯ ಅವನಿಗೆ ಮಳೆ ಮತ್ತು ಗಾಳಿಯ ಆರ್ಭಟ ಬಿಟ್ಟರೆ ಬೇರೆ ಏನೂ ಕೇಳಿಸಲಿಲ್ಲ. ನಂತರ, ಹೆಂಡತಿಯ ಕೋಣೆಯಲ್ಲಿ ನೆಲದ ಮೇಲೆ ಏನನ್ನೋ ದರದರನೆ ಎಳೆದುಕೊಂಡು ಹೋಗುತ್ತಿರುವಂತೆ ಭಾಸವಾಗತೊಡಗಿತು. ಮರುಕ್ಷಣವೇ 'ದಢಾರ್!!' ಎಂದು ಮನೆಯೊಳಗೆಲ್ಲಾ ಪ್ರತಿಧ್ವನಿಸಿದಂತೆ ನೆಲಕ್ಕಪ್ಪಳಿಸಿದ ಶಬ್ದ.

ಇದನ್ನು ಕೇಳುತ್ತಿದ್ದಂತೆ ಸ್ಪೆನ್ಸರ್ ಭೀಕರವಾಗಿ ಚೀರುತ್ತಾ ಮಂಚದ ಮೇಲಿಂದ ಜಿಗಿದು, ಮೆಟ್ಟಿಲುಗಳನ್ನು ಹಾರಿ ಬಾಗಿಲನ್ನು ರಪ್ಪನೆ ತೆರೆದು ಹೊರಗಿನ ಕತ್ತಲಿಗೆ ಜಿಗಿದು ಮಳೆ ಗಾಳಿ ಎನ್ನದೆ ಓಡಲಾರಂಭಿಸಿದ. ಅವನ ಹಿಂದೆಯೇ ಬಾಗಿಲು ಗಾಳಿಯ ಹೊಡೆತಕ್ಕೆ ಮತ್ತೆ ಮುಚ್ಚಿಕೊಂಡಿತು.

ಹೂದೋಟದ ಗೇಟಿಗೆ ಆನಿಸಿ ನಿಂತು ಅವನು ಏದುಸಿರು ಬಿಡುತ್ತಾ ಸುಧಾರಿಸಿಕೊಳ್ಳತೊಡಗಿದ. ಮತ್ತೆ ಓಡಲು ಅವನ ಕಾಲುಗಳು ತಯಾರಾಗಿದ್ದರೂ, ಪಾದರಕ್ಷೆಗಳಿಲ್ಲದೆ ಉರಿಯುತ್ತಿದ್ದವು. ತಣ್ಣನೆಯ ಮಳೆ ಜೀವ ಹಿಂಡುತ್ತಿತ್ತು. ಆದರೂ, ಇದಾವುದರ ಪರಿವೆಯೇ ಇಲ್ಲದೆ ಸ್ಪೆನ್ಸರ್ ಮತ್ತೆ ಓಡತೊಡಗಿದ. ಅವನು ಸಂಪೂರ್ಣವಾಗಿ ನೆಂದು ತೊಪ್ಪೆಯಾಗಿ ಚಳಿಯಿಂದ ಹಲ್ಲುಗಳನ್ನು ಕಟಕಟಿಸುತ್ತಿದ್ದ. ಮುಂದೆ ಓಡುವುದು ಸಾಧ್ಯನೇ ಇರಲಿಲ್ಲ. ಕಾಲೆಳೆಯುತ್ತಾ ಅವನು ವಾಪಸ್ಸಾಗತೊಡಗಿದ. ಬಾಗಿಲು ಮುಚ್ಚಿಕೊಂಡಿತ್ತು. ಕೀ ಇಲ್ಲದೆ ತೆರೆಯಲು ಸಾಧ್ಯವೇ ಇರಲಿಲ್ಲ. ಮಳೆಯಿಂದ ರಕ್ಷಣೆ ದೊರಕಿದರೂ ಚಳಿ ತಡೆಯಲಾಗದೆ ಅವನು ಬಾಗಿಲ ಬಳಿಯೇ ಕುಸಿದು ಬಿದ್ದ.

★★★

ಸ್ಪೆನ್ಸರನಿಗೆ ಎಚ್ಚರವಾದಾಗ ಅವನನ್ನು ಅರ್ಧ ಎತ್ತಿಕೊಂಡೊ, ಎಳೆದುಕೊಂಡೊ ಎಂಬಂತೆ ಮೆಟ್ಟಿಲುಗಳ ಮೇಲೆ ಕೊಂಡೊಯ್ಯುತ್ತಿದ್ದರು. ಅವನು ಮೈಮೇಲೆ ಭೂತ ಹೊಕ್ಕಂತೆ ಅದುರುತ್ತಿದ್ದ. ಎದೆಯಲ್ಲಿ, ತಲೆಯಲ್ಲಿ ಅಸಹನೀಯ ನೋವು. ಯಾರೋ ಅವನನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

"ನೀವು ಪ್ರಜ್ಞೆ ತಪ್ಪಿದ್ದೀರಿ! ಸತ್ತೇ ಹೋಗಿದ್ದೀರೆಂದು ಅನಿಸಿತ್ತು…" ಹನ್ನಾಳ ಸ್ವರ ಅವನಿಗೆ ಮೈಲು ದೂರದಿಂದೆಂಬಂತೆ ಕೇಳಿಸಿತು.

"ಡಾಕ್ಟರ್… ಡಾಕ್ಟರ್…" ಅವನು ತೊದಲಿದ.

"ಡಾಕ್ಟರರಿಗೆ ಕಾದು ಕಾದು ದಣಿದು ನಾನು ಹಿಂದಿರುಗಿದೆ. ಒಳ್ಳೆದೇ ಆಯಿತು. ಇಲ್ಲದಿದ್ದಲ್ಲಿ ನೀವು ಖಂಡಿತಾ ಸತ್ತು ಹೋಗಿರುತ್ತಿದ್ದೀರಿ! ಡಾಕ್ಟರ್ ಇಷ್ಟರಲ್ಲೇ ಬರಬಹುದು." ಹನ್ನಾ ಎಂದಳು.

ಹನ್ನಾ ಅವನನ್ನು ಮಂಚದ ಮೇಲೆ ಕುಳ್ಳಿರಿಸಿ ಕೋಣೆಯನ್ನು ಉಗುಬಗೆಯಿಂದ ಸರಿಮಾಡತೊಡಗಿದಳು. ಖಾಲಿ ನೀರಿನ ಗ್ಲಾಸು, ಅರ್ಧ ಕುಡಿದ ಚಹಾದ ಕಪ್ಪು ಟ್ರೇನಲ್ಲಿಟ್ಟು ಆಕೆ ಹೊರಹೋಗುವುದನ್ನು ಅವನು ಭಾರವಾದ ಕಣ್ಣುಗಳಿಂದ ಗಮನಿಸಿದ.

ವಾಪಸ್ಸು ಬಂದಾಗ ಹನ್ನಾ ಹೇಳಿದಳು, "ನಾನು ಮೇಡಮರ ಕೋಣೆಯ ಕಿಟಕಿಯನ್ನೇ ಮುಚ್ಚಲು ಮರೆತಿದ್ದೆ. ಗಾಳಿಗೋ ಏನೋ, ಮೇಜಿನ ಮೇಲಿದ್ದ ಹೂದಾನಿ ನೆಲಕ್ಕೆ ಬಿದ್ದು ಚೂರು ಚೂರಾಗಿದೆ! ನಿಮಗೆ ಶಬ್ದ ಕೇಳಿಸಿರಬೇಕು?" ಅವಳ ಕಣ್ಣುಗಳಲ್ಲಿ ಕುಹಕ ನಗು ಕಂಡಿತು ಸ್ಪೆನ್ಸರನಿಗೆ.